1	2	3	4	5
13.	ಶಿವಮೊಗ್ಗ	1. ಎಂ.ಪಿ.ಎಂ. ಶುಗರ್ಸ್	2	ಭದ್ರಾವತಿ
		2. ತುಂಗಭದ್ರಾ ಶುಗರ್ಸ್		ಶಿವಮೊಗ್ಗ
14.	ಬೆಳಗಾಂ	1. ದೂಧಗಂಗಾ ಕೃಷ್ಣಾ ಸ.ಸ.ಕಾ		ಚಿಕ್ಕೋಡಿ
		2. ಘಟಪ್ರಭಾ ಸ.ಸ.ಕಾ.		ಗೋಕಾಕ
		3. ಹಾಲಸಿದ್ಧನಾಥ ಸ.ಸ.ಕಾ.		ನಿಪ್ಪಾಣಿ
		4. ಹಿರಣ್ಯಕೇಶಿ ಸ.ಸ.ಕಾ.	7	ಸಂಕೇಶ್ವರ
		5. ಮಲಪ್ರಭಾ ಸ.ಸ.ಕಾ.		ಎಂ.ಕೆ. ಹುಬ್ಬಳ್ಳಿ
		6. ರಾಯಬಾಗ್ ಸ.ಸ.ಕಾ.		ರಾಯಬಾಗ್
		7. ಉಗಾರ ಶುಗರ್ ವರ್ಕ್ಸ್		ಉಗಾರ್-ಖುರ್ದ್
		ಒಟ್ಟು	30	

ವಿಷಯ:- ಬಿಜಾಪುರದಲ್ಲಿ ನೀರು ಪೂರೈಕೆ.

55(102)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ):- ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ಬಿಜಾಪುರ ನಗರದಲ್ಲಿ 7 ದಿನಕ್ಕೊಮ್ಮೆ ಒಂದೂವರೆ ಗಂಟೆ ಮಾತ್ರ ಕುಡಿಯುವ ನೀರು ಬಿಡುತ್ತಿರುವುದು ನಿಜವೇ;

ಆ) ಇದಕ್ಕೆ ವಿದ್ಯುತ್ ಅಭಾವ ಕಾರಣವೇ? ಅಥವಾ ಬೇರೆ ಕಾರಣಗಳೇನು;

ಇ) ನೀರು ಪೂರೈಕೆಗಾಗಿ ಪ್ರತ್ಯೇಕ ವಿದ್ಯುತ್ ಲೈನ್ ಹಾಕಲು ಬಿಜಾಪುರ ನಗರ ಸಭೆ ರೂ. 17 ಲಕ್ಷ ನೀಡಲಾಗಿದೆಯೇ?

ಶ್ರೀ ಬಿ.ಎನ್. ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು):-

ಅ) ನಿಜವಲ್ಲ. ಬಿಜಾಪುರ ನಗರದಲ್ಲಿ ನಾಲ್ಕು ದಿನಕ್ಕೊಮ್ಮೆ ಎರಡರಿಂದ ಎರಡೂವರೆ ಗಂಟೆ ಕುಡಿಯುವ ನೀರನ್ನು ಸರಬರಾಜು ಮಾಡಲಾಗುತ್ತಿದೆ.

ಆ) ಇದಕ್ಕೆ ವಿದ್ಯುತ್ ಅಭಾವವೂ ಒಂದು ಕಾರಣ. ಬಿಜಾಪುರ ನಗರ ನೀರು ಸರಬರಾಜು ಸ್ಥಾವರಗಳಿಗೆ ದಿನಂಪ್ರತಿ ಸರಾಸರಿ 16 ರಿಂದ 18 ಗಂಟೆ ಮಾತ್ರ ವಿದ್ಯುತ್ ಸರಬರಾಜು ಲಭ್ಯವಾಗುತ್ತಿದೆ. ಬಿಜಾಪುರ ನಗರದ ನೀರು ಸರಬರಾಜು ವಿತರಣಾ ವ್ಯವಸ್ಥೆ ಬಹಳ

ಹಳೆಯದಾಗಿದ್ದು ಹಾಗೂ ಜಲಸಂಗ್ರಹಾಲಯಗಳ ಒಟ್ಟು ಸಾಮರ್ಥ್ಯ ಕಡಿಮೆ ಇರುವುದರಿಂದ ನಗರದಲ್ಲಿ ಪ್ರತಿ ನಾಲ್ಕು ದಿವಸಗಳಿಗೊಮ್ಮೆ ತಲಾ 50 ಗ್ಯಾಲನ್ (273 ಲೀಟರ್) ನೀರು ಸರಬರಾಜು ಮಾಡಲಾಗುತ್ತಿದೆ.

ಇ) ಇಲ್ಲ.

ವಿಷಯ:- ದ.ಕನ್ನಡ ಜಿಲ್ಲೆಯಲ್ಲಿ ಸ್ಥಾಪನೆ ಮಾಡಲ್ಪಡುವ ಕೈಗಾರಿಕೆಗಳಿಗೆ ಭೂಸ್ವಾಧೀನ.

56(96)

ಶ್ರೀ ಯು.ಆರ್. ಸಭಾಪತಿ (ಉಡುಪಿ):- ಮಾನ್ಯ ಬೃಹತ್ ಮಧ್ಯಮ ಕೈಗಾರಿಕೆ ಹಾಗೂ ಸಂಪನ್ಮೂಲಗಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:-

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಈಗ ಒಟ್ಟಾರೆ ಎಷ್ಟು ಕೈಗಾರಿಕೆಗಳನ್ನು ಸ್ಥಾಪಿಸಲು ಭೂಮಿ ಸ್ವಾಧೀನಪಡಿಸಲಾಗಿದೆ ; (ತಾಲ್ಲೂಕುವಾರು ವಿವರ ನೀಡುವುದು);

ಆ) ಈ ಭೂಮಿ ಸ್ವಾಧೀನಪಡಿಸುವಾಗ ಸಾರ್ವಜನಿಕರಿಂದ ಪ್ರತಿಭಟನೆ ಬಂದಿರಲಿಲ್ಲವೆ, ಬಂದಿದ್ದಲ್ಲಿ ಸರ್ಕಾರದವರು ಕೈಗೊಂಡ ಕ್ರಮಗಳೇನು ?(ವಿವರ ನೀಡುವುದು).

ಶ್ರೀ ಆರ್.ವಿ. ದೇಶಪಾಂಡೆ (ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಸಂಪನ್ಮೂಲಗಳ ಅಭಿವೃದ್ಧಿ ಸಚಿವರು):-

ಅ) ಒಟ್ಟು 4386-73 ಎಕರೆಗಳು. ತಾಲ್ಲೂಕುವಾರು ವಿವರ ಈ ಕೆಳಗಿನಂತಿದೆ:

ಕ್ರಮ ಸಂಖ್ಯೆ	ತಾಲ್ಲೂಕು	ಘಟಕ:ಕೈಗಾರಿಕಾ ಪ್ರದೇಶ	ಭೂಸ್ವಾಧೀನಪಡಿಸಿ ಕೊಂಡಿರುವ ಜಮೀನು
1.	ಮಂಗಳೂರು	ಮಂಗಳೂರು ಕೆಮಿಕಲ್ಸ್ ಅಂಡ್ ಫರ್ಟಿಲೈಸರ್ಸ್ ಲಿ. (ಎಂಸಿಎಫ್)	193-99
2.	ಮಂಗಳೂರು	ಕುದುರೆಮುಖ ಕಬ್ಬಿಣದ ಅದಿರು ಕಂಪನಿ (ಕೆಐಒಸಿಎಲ್)	154-93
3.	ಮಂಗಳೂರು	ಮಂಗಳೂರು ರಿಫೈನರಿ, ಪೆಟ್ರೋ ಕೆಮಿಕಲ್ಸ್ (ಎಂಆರ್‌ಪಿಎಲ್)	1506-83
4.	ಮಂಗಳೂರು	ಹಿಂದೂಸ್ತಾನ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿ. (ಹೆಚ್‌ಪಿಸಿಎಲ್)	438-96
5.	ಮಂಗಳೂರು	ಬಿ.ಎ.ಎಸ್.ಎಫ್	201-86
6.	ಮಂಗಳೂರು	ಭಾರತ್ ಪೆಟ್ರೋಲಿಯಂ ಕರ್ಪೊರೇಷನ್ ಲಿ. (ಬಿಪಿಸಿಎಲ್)	69-45
7.	ಮಂಗಳೂರು	ಜೆಸ್ಕೋ	615-52